

## ಪ್ರೇಮ ವಿವಾಹಕ್ಕೆ 'ಟ್ರಾಫಿಕ್ ಜಾಮ್' ಸಾಕ್ಷಿ!

ಬೆಂಗಳೂರಿನ 'ಸಿಲ್ಕ್ ಬೋರ್ಡ್'ನ ಟ್ರಾಫಿಕ್ ಕುಖ್ಯಾತವಾದುದು. 'ಸಿಲ್ಕ್ ಬೋರ್ಡ್' ನಂತರ ಸಾಲು ಸಾಲು ಐ.ಟಿ. ಕಂಪನಿಗಳಿವೆ. ಇದು ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯೂ ಹೌದು. ಹಾಗಾಗಿ, 'ಸಿಲ್ಕ್ ಬೋರ್ಡ್' ಜಂಕ್ಷನ್‌ನಲ್ಲಿ ರೇಜಿಗೆ ಹುಟ್ಟಿಸುವಷ್ಟು ಟ್ರಾಫಿಕ್. ಬೆಳಗ್ಗೆ ಹಾಗೂ ಸಂಜೆ ಈ ಟ್ರಾಫಿಕ್‌ನಿಂದ ಪಾರಾಗಿ ಬರುವುದು ಅನೇಕರ ಪಾಲಿಗೆ ಬಹುದೊಡ್ಡ ಗಂಡಾಂತರವನ್ನು ದಾಟಿದ ಅನುಭವ ನೀಡುತ್ತದೆ. ಇಂಥ ಟ್ರಾಫಿಕ್ ಚಕ್ರವ್ಯೂಹದಲ್ಲಿ ಪ್ರೇಮಕಥೆಯೊಂದು ಅರಳಿದರೆ ಹೇಗಿರುತ್ತದೆ ಎನ್ನುವ ಪ್ರಶ್ನೆಗೆ ಉತ್ತರ ನೀಡುವಂತಿದೆ 'ಸಿಲ್ಕ್ ಬೋರ್ಡ್' ಕಿರುಚಿತ್ರ.

ಸಂತೋಷ್ ನಿರ್ದೇಶನದ 'ಸಿಲ್ಕ್ ಬೋರ್ಡ್' ಜಂಕ್ಷನ್ 11 ನಿಮಿಷಗಳ ಕಿರುಚಿತ್ರ. ಬಹುತೇಕ ಸಂದರ್ಭಗಳಲ್ಲಿ, 11 ನಿಮಿಷಗಳಲ್ಲಿ ಟ್ರಾಫಿಕ್ ಜಾಮ್ ಕರುಗುವುದಿಲ್ಲ. ಆದರೆ, ಈ ಕಡಿಮೆ ಸಮಯದಲ್ಲೇ ಪ್ರೇಮ ಕೊನರಿ, ದಾಂಪತ್ಯ ಕುದುರಿ, ಪ್ರಣಯದ ಫಲವೂ ದೊರೆಯುವ ಪವಾಡ 'ಸಿಲ್ಕ್ ಬೋರ್ಡ್' ಕಿರುಚಿತ್ರದಲ್ಲಿದೆ. ತಮ್ಮ ಈ ಚಿತ್ರವನ್ನು ಸಂತೋಷ್ 'ಎ ಟ್ರಾಫಿಕ್ ಲವ್ ಸ್ಟೋರಿ' ಎಂದೇ ಕರೆದುಕೊಂಡಿದ್ದಾರೆ. ಸಿಲ್ಕ್ ಬೋರ್ಡ್ ಟ್ರಾಫಿಕ್ ಜಾಮ್‌ನಲ್ಲಿ ಆಕಸ್ಮಿಕವಾಗಿ ದೃಷ್ಟಿ ಬದಲಿಸಿಕೊಳ್ಳುವ ತರುಣ ತರುಣಿಯರು, ಪ್ರೇಮಿಗಳಾಗುತ್ತಾರೆ, ಸಂಗಾತಿಗಳೂ ಆಗುತ್ತಾರೆ. ವಿನೋದದ ಶೈಲಿಯಲ್ಲಿ ನಿರೂಪಣೆಗೊಂಡಿರುವ ಈ ಕಿರುಚಿತ್ರ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರವನ್ನು ಪಡೆದಿತ್ತು.

ನೋಡಿದರೆ ಮೆಟ್ರೊ ಸಂಪರ್ಕ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆಯೇ ಇದೆ. ಅಲ್ಲದೆ ನಗರದ ಒಳಪ್ರದೇಶಗಳಿಂದ ಮೆಟ್ರೋ ಕೇಂದ್ರಗಳಿಗೆ ಬರಲು ಸಾರ್ವಜನಿಕರು ಇತರೆ ನಗರಗಳಲ್ಲೂ ಅವಲಂಬಿಸಲೇಬೇಕಾಗಿದೆ.

'ಟ್ರಾಫಿಕ್ ಸಮಸ್ಯೆ ಬೆಂಗಳೂರಿನಂಥ ಮಹಾನಗರಗಳಿಗೆ ಸೀಮಿತ ಎನ್ನುವಂತಿಲ್ಲ. ಹುಬ್ಬಳ್ಳಿ, ಮೈಸೂರು, ಮಂಗಳೂರುಗಳಂಥ ಎರಡನೇ ಹಂತದ ನಗರಗಳಲ್ಲೂ ವಾಹನ ದಟ್ಟಣೆ ಹೆಚ್ಚುತ್ತಿದೆ' ಎನ್ನುತ್ತಾರೆ ಮೈಸೂರಿನ ವಿಷ್ಣುಪ್ರಸಾದ್. 'ಜಿಲ್ಲಾ ಕೇಂದ್ರಗಳಲ್ಲೂ ಶಾಲಾ ಕಾಲೇಜು, ಕಚೇರಿಗಳ ಸಮಯದಲ್ಲಿ ಸಂಚಾರ ಸುಗಮವಲ್ಲ. ಇನ್ನು ಹೆದ್ದಾರಿಗಳಲ್ಲಿನ ಟೋಲ್ ಸಂಗ್ರಹ ಕೇಂದ್ರಗಳ ಬಳಿ ಕೆಲವೊಮ್ಮೆ, ವಿಶೇಷವಾಗಿ ವಾರಾಂತ್ಯಗಳಲ್ಲಿ, ವಾಹನಗಳ ಬಾಲ ಬೆಳೆಯುವುದಿದೆ. ಚಾರ್ಮಾಡಿ ಘಾಟಿಯಲ್ಲಿ ಮೈಲಿಗಟ್ಟಲೆ ವಾಹನಗಳು ನಿಲ್ಲುವ ವರದಿಗಳು ಪ್ರತಿ ವರ್ಷ ಪ್ರಕಟವಾಗುತ್ತಲೇ ಇವೆ. ಹೆದ್ದಾರಿಗೆ ಹೊಂದಿಕೊಂಡಂತಹ ಊರುಕೇರಿಗಳಿಗೂ ವಾಹನ ಸಂದಣಿಯ ಬಿಸಿ ತಟ್ಟದೆ ಬಿಡುವುದಿಲ್ಲ. ನಗರೀಕರಣದ ಪರಿಣಾಮವಾದ ಈ ವಾಹನ ಸಂದಣಿ ಕಬಂಧ ಬಾಹುಗಳಂತೆ ತನ್ನ ವ್ಯಾಪ್ತಿಯನ್ನು ಹಿಗ್ಗಲಿಸಿಕೊಳ್ಳುತ್ತಲೇ ಇದೆ' ಎನ್ನುವುದು ತುಮಕೂರಿನಲ್ಲಿ ಶಿಕ್ಷಕಿಯಾಗಿರುವ ಅನ್ನಪೂರ್ಣ ಅವರ ಅನುಭವದ ಮಾತು.

ಒಂದೆಡೆ ವಾಹನ ದಟ್ಟಣೆ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ಸ್ವಂತ ವಾಹನಗಳನ್ನು ಹೊಂದುವ ಸಾರ್ವಜನಿಕರ ಬಯಕೆ ಹೆಚ್ಚುತ್ತಲೇ ಇದೆ. ವರ್ಷದಿಂದ ವರ್ಷಕ್ಕೆ ದ್ವಿಚಕ್ರ ವಾಹನ ಹಾಗೂ ಕಾರುಗಳ ಖರೀದಿ ಹೆಚ್ಚುತ್ತಲೇ ಇದೆ. ಕೆಲವು ಮನೆಗಳಲ್ಲಂತೂ ತಲೆಗೊಂದರಂತೆ ವಾಹನಗಳಿವೆ. ಒಬ್ಬರೇ ಹಲವು ವಾಹನಗಳನ್ನು ಹೊಂದಿರುವ ಉದಾಹರಣೆಗಳೂ ಸಾಮಾನ್ಯ ಎನ್ನುವಂತಾಗಿದೆ. ಅಂದರೆ, 'ಸಿರಿಜ್ವರ'ದ ಕೊಳ್ಳುಬಾಕ ಸಂಸ್ಕೃತಿಯ ಪ್ರತಿಫಲನಕ್ಕೆ ರಸ್ತೆಗಳು ಕನ್ನಡಿಗಳಾಗುತ್ತಿವೆ.



### ಸಮಸ್ಯೆಯ ಬಹುರೂಪ

ಟ್ರಾಫಿಕ್ ಸಮಸ್ಯೆಯಿಂದಾಗಿ ಉಂಟಾಗುವ ಸಮಸ್ಯೆಗಳು ಹಲವು ರೂಪದಲ್ಲಿರುತ್ತವೆ. ಟ್ರಾಫಿಕ್ ಜಾಮ್‌ನಿಂದಾಗಿ ಮನುಷ್ಯ ಜೀವನದ ಅವಧಿಯಷ್ಟೇ ಕುಂಠಿತವಾಗುವುದಿಲ್ಲ; ವ್ಯವಸ್ಥೆಯ ಉತ್ಪಾದನಾ ಸಾಮರ್ಥ್ಯವೂ ಕಡಿಮೆಯಾಗುತ್ತದೆ. ಬಹು ಅಮೂಲ್ಯವಾದ ಮಾನವ ಶ್ರಮದ ಸಮಯ ರಸ್ತೆಯಲ್ಲೇ ಸೋರಿಕೆಯಾಗುವುದು ದೇಶದ ಉತ್ಪಾದನಾ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಒಂದು ಅಧ್ಯಯನದ ಪ್ರಕಾರ, ಟ್ರಾಫಿಕ್ ಜಾಮ್‌ಗಳಿಂದಾಗಿ ದೆಹಲಿಯಲ್ಲಿ ಪ್ರತಿ ವರ್ಷ 60 ಸಾವಿರ ಕೋಟಿ ರೂಪಾಯಿ ಸಾಮಾಜಿಕ ವೆಚ್ಚವಾಗುತ್ತಿದೆ. ಈ ಪ್ರಮಾಣ ಬೆಂಗಳೂರಲ್ಲಿ 37 ಸಾವಿರ ಕೋಟಿ ರೂಪಾಯಿ ಎನ್ನಲಾಗಿದೆ.